ವಿಶ್ವವಾಣಿ

**Thursday 18th May 2023, Page No.01**

## Bangalore RVCE Student got 90 lakhs job offer

# ಬೆಂಗಳೂರು ಹುಡುಗನಿಗೆ ಸಿಕ್ಕ ₹90 ಲಕ್ಷದ ನೌಕರಿಯ ಆಫರ್!

### ಪ್ಲೇಸ್‌ಮೆಂಟ್‌ನಲ್ಲಿ ಆರ್‌ವಿಸಿಇ ವಿದ್ಯಾರ್ಥಿ ರಕ್ಷಿತ್ ಹೆಗಡೆ ದಾಖಲೆ

**ಬೆಂಗಳೂರು:** ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸೆಂಟರ್‌ನ ವಿದ್ಯಾರ್ಥಿಗಳು ಈ ಬಾರಿ ಪ್ಲೇಸ್‌ಮೆಂಟ್‌ನಲ್ಲಿ ದಾಖಲೆ ಪ್ಯಾಕೇಜ್ ಪಡೆದುಕೊಳ್ಳುತ್ತಿದ್ದು, ಬೆಂಗಳೂರಿನ ಎಂಜಿನಿಯರಿಂಗ್ ವಿದ್ಯಾರ್ಥಿ 90 ಲಕ್ಷ ರು.ನ ವಾರ್ಷಿಕ ಸಂಬಳದ ಉದ್ಯೋಗದ ಆಫರ್ ಪಡೆದುಕೊಂಡು ಎಲ್ಲರ ಹುಬ್ಬೇರಿಸಿದ್ದಾರೆ.



ಜಾಗತಿಕ ಆರ್ಥಿಕ ಹಿಂಜರಿತದ ಕಾರಣಕ್ಕೆ ಹಲವು ದೊಡ್ಡದೊಡ್ಡ ಕಂಪನಿಗಳಲ್ಲಿ ಉದ್ಯೋಗಿಗಳ ಸಂಖ್ಯೆ ಕಡಿತ ಮಾಡುತ್ತಿರುವ ನಡುವೆಯೂ ಈ ಬಾರಿ ಕ್ಯಾಂಪಸ್ ಆಯ್ಕೆಯಲ್ಲಿ ರಾಜ್ಯದ ವಿದ್ಯಾರ್ಥಿಗಳು ಅಮೋಘ ಸಾಧನೆ ಮಾಡುತ್ತಿದ್ದಾರೆ. ಬೆಂಗಳೂರಿನ ಆರ್‌ವಿ ಎಂಜಿನಿಯರಿಂಗ್ ಕಾಲೇಜಿನ ರಕ್ಷಿತ್ ದತ್ತಾತ್ರೇಯ ಹೆಗಡೆ ಬೆಂಗಳೂರಿನಲ್ಲಿ ಅತಿ ಹೆಚ್ಚು ಪ್ಲೇಸ್‌ಮೆಂಟ್ ಪ್ಯಾಕೇಜ್ ಪಡೆದ ವಿದ್ಯಾರ್ಥಿಗಳಲ್ಲಿ ಒಬ್ಬರಾಗಿದ್ದಾರೆ.

ಆರ್‌ವಿಸಿಇನಲ್ಲಿ ಇನ್ಫರ್ಮೇಷನ್ ಟೆಕ್ನಾಲಜಿಯಲ್ಲಿ ಬ್ಯಾಚುಲರ್ ಆಫ್ ಎಂಜಿನಿಯರಿಂಗ್ (ಬಿಇ)ನ 5ನೇ ಸೆಮಿಸ್ಟರ್‌ನಲ್ಲಿ ಓದುತ್ತಿರು ರಕ್ಷಿತ್ ಹೆಗಡೆಗೆ ನ್ಯೂಯಾರ್ಕ್‌ನಲ್ಲಿ ಪ್ರಧಾನ ಕಚೇರಿ ಹೊಂದಿರುವ ಬಹುರಾಷ್ಟ್ರೀಯ ಸಾಫ್ಟ್‌ವೇರ್ ಕಂಪನಿ 'UiPath' 90 ಲಕ್ಷ ರು. ಪ್ಯಾಕೇಜ್‌ನ ಉದ್ಯೋಗದ ಈ ಆಫರ್ ನೀಡಿದೆ. ಕಂಪನಿಯು ರೊಬೋಟಿಕ್ ಪ್ರೊಸೆಸ್ ಆಟೋಮೇಷನ್ (RPA) ಸಾಫ್ಟ್‌ವೇರ್ ಅನ್ನು ಉತ್ಪಾದಿಸುತ್ತದೆ. ರಕ್ಷಿತ್ ಅವರ ಲಿಂಕ್ಡ್‌ಇನ್ ಪ್ರೊಫೈಲ್‌ನ ಪ್ರಕಾರ ಅವರು UiPathನಲ್ಲಿ 'ಅಪ್ ಕಮಿಂಗ್ ಸಾಫ್ಟ್‌ವೇರ್ ಎಂಬಿನಿಯರ್ ಇಂಟರ್ನ್ ಆಗಿದ್ದಾರೆ.

### ಸಾಫ್ಟ್‌ವೇರ್ ಜನಕ

**ಕಾಲೇಜು ದಿನಗಳಲ್ಲೇ ರಕ್ಷಿತ್, 'ಸ್ಟಡಿಬೇರ್' ಎಂಬ ಸಾಫ್ಟ್ ವೇರ್ ಆಪ್ಲಿಕೇಶನ್ ಅಭಿವೃದ್ಧಿಪಡಿಸಿದ್ದು ಇದರ ಕೋ- ಫೌಂಡರ್ ಕೂಡ ಹೌದು. ಇದು ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಉತ್ಪಾದಕತೆ ವೇದಿಕೆಯಾಗಿದ್ದು, ಎಂಜಿನಿಯರ್‌ಆಗಲು ಬಯಸುವವರಿಗೆ ಮಾರ್ಗದರ್ಶಿಯಾಗಲಿದೆ.**